**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿ/ಅರಿವು ಕೇಂದ್ರ/225/2024 ದಿನಾಂಕ:14.03.2024
Comp. No.:1084443

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯತಿ ಅರಿವು ಕೇಂದ್ರದ ಮೂಲಕ "ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ"ವನ್ನು ಶಾಲೆಗಳಿಗೆ ಬೇಸಿಗೆ ರಜೆ ಪ್ರಾರಂಭವಾದಾಗಿನಿಂದ ಬೇಸಿಗೆ ರಜೆ ಅಂತ್ಯಗೊಳ್ಳುವವರೆಗೆ - ಏಪ್ರಿಲ್2024 ರಿಂದ ಮೇ 2024 ರ ಮಾಹೆಯಲ್ಲಿ ಆಯೋಜಿಸುವುದರ ಕುರಿತು. (ಲೋಕಸಭೆಯ ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದಲ್ಲಿ ಚುನಾವಣೆ ನೀತಿ ಸಂಹಿತೆ ಮುಗಿದ ನಂತರ)

*****

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಗ್ರಾಮ ಪಂಚಾಯಿತಿ ಅರಿವು ಕೇಂದ್ರದಲ್ಲಿ ಹಲವು ಮಕ್ಕಳ ಸ್ನೇಹಿ ಚಟುವಟಿಕೆಗಳನ್ನು ಈಗಾಗಲೇ ಹಮ್ಮಿಕೊಳ್ಳಲಾಗಿದೆ. ಮುಂದುವರೆದ ಭಾಗವಾಗಿ ಗ್ರಾಮ ಪಂಚಾಯಿತಿ ನೇತೃತ್ವದಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಅರಿವು ಕೇಂದ್ರಗಳ ಮೂಲಕ ಶಾಲೆಗಳ ಬೇಸಿಗೆ ರಜೆಯ ಸಮಯದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಶಿಬಿರದ ನಿರ್ವಹಣೆಯನ್ನು ಅರಿವು ಕೇಂದ್ರದ ಮೇಲ್ವಿಚಾರಕರು, ಗ್ರಾಮ ಪಂಚಾಯತಿ ಪುನರ್ವಸತಿ ಕಾರ್ಯಕರ್ತರು ಮತ್ತು ಗುರುತಿಸಿದ ಸ್ವಯಂಸೇವಕರೊಂದಿಗೆ (ಆಸಕ್ತ ಶಾಲಾ ಶಿಕ್ಷಕರು/ ನಿವೃತ್ತ ಶಾಲಾ ಶಿಕ್ಷಕರು/ ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು / ಕಾಲೇಜು ವಿದ್ಯಾರ್ಥಿಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು/ ಸಂಘ ಸಂಸ್ಥೆಗಳು) ಪರಿಣಾಮಕಾರಿಯಾಗಿ ಆಯೋಜಿಸಲು ಕ್ರಮವಹಿಸುವುದು. ಆಡಳಿತಾತ್ಮಕ ಬೆಂಬಲವನ್ನು ನೀಡುವುದರ ಜೊತೆಗೆ ಶಿಬಿರದ ಪೂರ್ಣ ಮೇಲುಸ್ತುವಾರಿಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸುವುದು.

## ಶಿಬಿರದ ಉದ್ದೇಶ

ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳು ತಮ್ಮ ಬೇಸಿಗೆ ರಜೆಯನ್ನು ಮನರಂಜನೀಯವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಬೇಸಿಗೆ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಓದುವ, ಬರೆಯುವ, ಅಂಕಿಸಂಖ್ಯೆ, ವಿಜ್ಞಾನ ವಿಷಯಗಳು, ನಾಯಕತ್ವ ಮತ್ತು ಸಂವಹನ ಕೌಶಲ್ಯವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಲಾಗಿದೆ. ಪರಿಸರ ಕಾಳಜಿ, ಸಾಮಾಜಿಕ ಕಾಳಜಿ ಬೆಳೆಸುವುದು ಮತ್ತು ಸ್ಥಳೀಯ ಸಂಸ್ಕೃತಿ, ಜೀವನ ಶೈಲಿ, ಇತಿಹಾಸ ಅಂಶಗಳನ್ನು ತಿಳಿಯುವಂತೆ ಮಾಡುವುದು ಹಾಗೂ ಮಕ್ಕಳಲ್ಲಿರುವ ಸೃಜನಾತ್ಮಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಬೇಸಿಗೆ ಶಿಬಿರದ ಆಶಯವಾಗಿರುತ್ತದೆ. ತನ್ಮೂಲಕ ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಲು ಮಕ್ಕಳನ್ನು ಪ್ರೇರೇಪಿಸುವುದು.

## ಶಿಬಿರದ ಚಟುವಟಿಕೆಗಳು

- ಮಕ್ಕಳಲ್ಲಿ ಸೃಜನಾತ್ಮಕತೆಗೆ ಸಹಾಯಕವಾಗಿ ಮಕ್ಕಳ ಪುಸ್ತಕ, ದಿನಪತ್ರಿಕೆ, ನಿಯತಕಾಲಿಕೆಗಳನ್ನು ಓದುವುದು, ಚಿತ್ರ ಓದುವಿಕೆ (ಕಾರ್ಡ್), ಕಥೆ ಕಟ್ಟುವಿಕೆ, ನಿಧಿ ಶೋಧ (Treasure hunt), ಗಟ್ಟಿ ಓದು (Read Aloud) ಮತ್ತು ಪತ್ರ ಬರವಣಿಗೆಗೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳನ್ನು ಶಿಬಿರದ ಅವಧಿಯಲ್ಲಿ ಆಯೋಜಿಸುವುದು.

- ಶಿಬಿರದ ಚಟುವಟಿಕೆಗಳಿಗೆ ಅವಶ್ಯವಿರುವ ಸ್ಥಳಾವಕಾಶ, (ಒಳಾಂಗಣ ಮತ್ತು ಹೊರಾಂಗಣ) ಸಾಧನ ಸಲಕರಣೆಗಳು ಶಾಲೆಗಳಲ್ಲಿ ಲಭ್ಯವಿದ್ದಲ್ಲಿ ಮುಖ್ಯ ಶಿಕ್ಷಕರೊಂದಿಗೆ ಸಮನ್ವಯತೆಯಲ್ಲಿ ಬಳಸಿಕೊಳ್ಳುವುದು.
- ಅಂಕಿ ಸಂಖ್ಯೆ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಕಾಮನಬಿಲ್ಲು ಮೂಡಿಸುವಿಕೆ, ವಿವಿಧ ಗಣಿತದ ಘನಾಕೃತಿಗಳ ಪರಿಚಯ, ಚಿನ್ನಿ ದಾಂಡು, ಗ್ರಾಮದಲ್ಲಿ ಬಳಸುವ ಅಳತೆ ಮತ್ತು ಮಾಪಕಗಳು, ಟ್ಯಾನ್‌ಗ್ರ್ಯಾಮ್, ಪೇಪರ್ ಫ್ಯಾನ್, ಜೆಟ್ ಪ್ಲೇನ್, ಕಣ್ಣು ಮಿಟುಕಿಸುವ ಗೊಂಬೆ, ಚದುರಂಗ, ಕೇರಂ, ಆಕಾಶ ವೀಕ್ಷಣೆ ಮತ್ತಿತರೆ ಚಟುವಟಿಕೆಗಳನ್ನು ಸ್ಥಳೀಯವಾಗಿ ಹಮ್ಮಿಕೊಳ್ಳುವುದು.
- ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ ನಾಯಕತ್ವ, ನೈತಿಕತೆ , ಸಹಾನುಭೂತಿ, ಜವಾಬ್ದಾರಿ ನಿರ್ವಹಣೆ, ತಂಡ ನಿರ್ವಹಣೆ, ಸಾಮಾಜಿಕ ಹೊಂದಾಣಿಕೆ ಮತ್ತು ನಾಗರಿಕ ಪ್ರಜ್ಞೆ ವಿಷಯವಾಗಿ ವಿವಿಧ ಚಟುವಟಿಕೆಗಳನ್ನು ನಡೆಸುವುದು.
- ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು, ದೈನಂದಿನ ಬದುಕಿನಲ್ಲಿ ಕಾಣುವ ಚಟುವಟಿಕೆಗಳನ್ನು ಅರಿಯಲು, ಶೋಧನಾ ಪ್ರವೃತ್ತಿ ಪ್ರೋತ್ಸಾಹಿಸಲು ಮತ್ತು ಕಲಿತದ್ದನ್ನು ವರದಿ ಮಾಡಲು ಯೋಜನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಯೋಜನಾ ಚಟುವಟಿಕೆಗಳಲ್ಲಿ ಪ್ರಮುಖವಾಗಿ ನಮ್ಮೂರಿನ ಪಕ್ಷಿಗಳು, ನೀರಿನ ಪಯಣ, ನನ್ನ ಊರು, ನಮ್ಮೂರಿನ ಇತಿಹಾಸ, ನಮ್ಮೂರ ಜಾತ್ರೆ, ನಮ್ಮೂರ ಜನಪದ ಗೀತೆಗಳು/ಜನಪದ ಕಥೆ, ನಮ್ಮೂರ ಕ್ರೀಡೆಗಳು. ನಮ್ಮೂರ ಕಲೆಗಳು, ಸ್ಥಳೀಯ ಸಂಸ್ಥೆಗಳಿಗೆ (ಅಂಚೆ ಕಛೇರಿ, ಹಾಲು ಉತ್ಪಾದಕರ ಸಹಕಾರ ಸಂಘ, ಬ್ಯಾಂಕ್, ಪಶು ವೈದ್ಯಕೀಯ ಆಸ್ಪತ್ರೆ, ಅಂಗನವಾಡಿ ಕೇಂದ್ರ ಗ್ರಾಮ ಪಂಚಾಯಿತಿ, ಆಸ್ಪತ್ರೆ ಇತ್ಯಾದಿ) ಭೇಟಿ ಮಾಡಲು ಹಾಗೂ ಯೋಜನಾ ಕಾರ್ಯವನ್ನು ಕೈಗೊಳ್ಳಲು ಹತ್ತು ಮಕ್ಕಳ ತಂಡವನ್ನು ರಚಿಸಿಕೊಳ್ಳುವುದು ಹಾಗೂ ಭೇಟಿಗೆ ಅಗತ್ಯ ಕ್ರಮವಹಿಸುವುದು.
- ಶಿಬಿರದ ಅವಧಿಯಲ್ಲಿ ಮಕ್ಕಳಲ್ಲಿ ಲವಲವಿಕೆ ಮೂಡಿಸುವ ವಿವಿಧ ಚಟುವಟಿಕೆಗಳನ್ನು (ಸಂದೇಶವುಳ್ಳ ಆಟಗಳನ್ನು) ಏರ್ಪಡಿಸುವುದು.
- ಬೇಸಿಗೆ ಶಿಬಿರವನ್ನು ಆಯೋಜಿಸಲು,
  - **ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಮಾರ್ಗಸೂಚಿಯನ್ನು ಲಗತ್ತಿಸಿದೆ.**

    **ಕಳೆದ ಸಾಲಿನಲ್ಲಿ ಮಕ್ಕಳ ಬೇಸಿಗೆ ಶಿಬಿರವನ್ನು ಆಯೋಜಿಸಲು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ವತಿಯಿಂದ ಸಿದ್ಧಪಡಿಸಲಾದ "ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಚಟುವಟಿಕೆಗಳ ಆಯೋಜನೆ ಕೈಪಿಡಿ"ಯನ್ನು ಈ ಕೆಳಕಂಡ ಲಿಂಕ್ ನಲ್ಲಿ ಪಡೆದುಕೊಳ್ಳುವುದು.**

    https://acrobat.adobe.com/id/urn:aaid:sc:AP:e488e0e0-b869-47e3-9b5c-2596ebdab2e4

**ಅನುಷ್ಠಾನ**

1. **ಶಿಬಿರದ ಅವಧಿ:** 15 ದಿನಗಳು( ಸ್ಥಳೀಯವಾಗಿ ಸೂಕ್ತವಾದ ದಿನಾಂಕಗಳು)
2. **ಶಿಬಿರದ ಸಮಯ:** ಬೆಳಿಗ್ಗೆ 10.00ರಿಂದ 01.30ಗಂಟೆಯವರೆಗೆ
3. **ಶಿಬಿರದಲ್ಲಿ ಭಾಗವಹಿಸುವ ಮಕ್ಕಳ ಸಂಖ್ಯೆ:** ಪ್ರತಿ ಶಿಬಿರಕ್ಕೆ 40 ಮಕ್ಕಳು
4. **ಶಿಬಿರದಲ್ಲಿ ಭಾಗವಹಿಸುವ ಮಕ್ಕಳ ವಯಸ್ಸು:** 8 ರಿಂದ 13 ವರ್ಷಗಳು
5. **ಶಿಬಿರದ ಸ್ಥಳ** : ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದ ಸರ್ಕಾರಿ ಶಾಲೆ/ ಗ್ರಾಮ ಪಂಚಾಯಿತಿ ಅರಿವು ಕೇಂದ್ರ.

6. ಬೇಸಿಗೆ ಶಿಬಿರವನ್ನು ಗ್ರಾಮ ಪಂಚಾಯಿತಿ ನೇತೃತ್ವದಲ್ಲಿ ಅನುಷ್ಠಾನಗೊಳಿಸುವುದು. ಈ ಕೆಳಕಂಡಂತೆ ಪೂರ್ವ ತಯಾರಿ ಮಾಡಿಕೊಳ್ಳುವುದು.
   - ಶಾಲೆಯ ಸಹಯೋಗದಲ್ಲಿ ಪೋಷಕರನ್ನು ಸಂಪರ್ಕಿಸಿ ಶಿಬಿರಕ್ಕೆ ಮಕ್ಕಳನ್ನು ಆಯ್ಕೆ ಮಾಡುವುದು ಮತ್ತು ಪೋಷಕರ ಒಪ್ಪಿಗೆ (ಪತ್ರ ಮುಖೇನ) ಪಡೆಯುವುದು.
   - ಗ್ರಾಮ ಪಂಚಾಯಿತಿ ಅಧ್ಯಕ್ಷರು/ಸದಸ್ಯರು/ಸ್ವ-ಸಹಾಯಸಂಘಗಳು/ಯುವಕ ಸಂಘಗಳು/ಮುಖಂಡರು ಇತ್ಯಾದಿ ಭಾಗೀದಾರರನ್ನು ಸಂಪರ್ಕಿಸಿ ಅವರ ಸಹಕಾರವನ್ನು ಪಡೆಯುವುದು.
   - ಮಗುವು ಪ್ರತಿ ದಿನ ಮನೆಯಿಂದ ಲಘು ಉಪಹಾರ ಮತ್ತು ನೀರನ್ನು ತರುವಂತೆ ಪೋಷಕರ ಗಮನಕ್ಕೆ ತರುವುದು.
   - ಶಿಬಿರಕ್ಕೆ ಮಗುವನ್ನು ಕರೆತರುವುದು ಮತ್ತು ಕರೆದುಕೊಂಡು ಹೋಗುವುದು ಪೋಷಕರ ಜವಾಬ್ದಾರಿ.
7. ಶಿಬಿರಕ್ಕೆ ಪೂರಕವಾಗಿ ಬೇಕಾಗಿರುವ ಅಗತ್ಯ ಸಾಮಗ್ರಿಗಳನ್ನು ಗ್ರಾಮ ಪಂಚಾಯಿತಿಯಿಂದ ಪೂರೈಸುವುದು. ಈ ವೆಚ್ಚವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯ ಉಪಕರ ಮತ್ತು ಸ್ವಂತ ಸಂಪನ್ಮೂಲದಿಂದ ಭರಿಸಬಹುದಾಗಿದೆ.
8. ಅರಿವು ಕೇಂದ್ರದ ಮೇಲ್ವಿಚಾರಕರು ಈ ಬೇಸಿಗೆ ಶಿಬಿರದ ಸುಗಮಗಾರರಾಗಿ ಕಾರ್ಯನಿರ್ವಹಿಸುವುದು.
9. ಶಿಬಿರದಲ್ಲಿ ವಿಜ್ಞಾನ ಮತ್ತು ಗಣಿತದ ಚಟುವಟಿಕೆಗಳನ್ನು ನಡೆಸಲು ಸ್ಥಳೀಯ ಶಾಲೆಯ ಶಿಕ್ಷಕರನ್ನು/ಸ್ವಯಂಪ್ರೇರಿತ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳುವುದು.
10. ಶಿಬಿರದಲ್ಲಿ ಭಾಗವಹಿಸುವ ಸ್ವಯಂಸೇವಕರಿಗೆ ಪ್ರಯಾಣ ವೆಚ್ಚವನ್ನು ಗ್ರಾಮ ಪಂಚಾಯಿತಿಯಿಂದ ಭರಿಸುವುದು.
11. ಸ್ಥಳೀಯ ಕಲಾವಿದರನ್ನು ಗುರುತಿಸಿ ಅವರ ಮೂಲಕ ಮಕ್ಕಳಿಗೆ ಸ್ಥಳೀಯ ಕಲಾ ಪ್ರಕಾರಗಳನ್ನು ಪರಿಚಯ ಮಾಡಿಸುವುದು.
12. ಬೇಸಿಗೆ ಶಿಬಿರ ನಡೆಯುವ ಸ್ಥಳದಲ್ಲಿ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಮತ್ತು ಶುಚಿತ್ವ ಇರುವಂತೆ ನೋಡಿಕೊಳ್ಳುವುದು.
13. ಶಿಬಿರದ ಕೊನೆಯ ದಿನ ಮಕ್ಕಳೇ ಶಿಬಿರದ ಸಮಾರೋಪ ಸಮಾರಂಭವನ್ನು ಆಯೋಜಿಸುವಂತೆ ಮತ್ತು ನಿರ್ವಹಿಸುವಂತೆ ವ್ಯವಸ್ಥೆ ಮಾಡುವುದು. ಮಕ್ಕಳಿಂದಲೇ ಬರೆಯಲ್ಪಟ್ಟ ಆಹ್ವಾನ ಪತ್ರಿಕೆಗಳನ್ನು ಬಳಸುವುದು.
14. ಶಿಬಿರದಲ್ಲಿ ಮಕ್ಕಳ ಕಲಿತ ವಿಶೇಷ ಚಟುವಟಿಕೆಗಳನ್ನು ಮತ್ತು ಯೋಜನಾ ಕಾರ್ಯಗಳನ್ನು ಚುನಾಯಿತ ಪ್ರತಿನಿಧಿಗಳು, ಪೋಷಕರು, ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆಯ ಸದಸ್ಯರು ಮತ್ತು ಸಮುದಾಯ ಮುಖಂಡರ ಸಮ್ಮುಖದಲ್ಲಿ ಪ್ರಸ್ತುತ ಪಡಿಸುವಂತೆ ನೋಡಿಕೊಳ್ಳುವುದು.
15. ಅರಿವು ಕೇಂದ್ರದ ಮೇಲ್ವಿಚಾರಕರು ಶಿಬಿರದ ನಂತರ ಸಂಕ್ಷಿಪ್ತ ವರದಿಯನ್ನು ಫೋಟೋ/ ಪ್ರಮುಖ ಚಟುವಟಿಕೆಗಳ ವೀಡಿಯೋ ಸಹಿತ ಸಿದ್ದಪಡಿಸಿ ಶಿಬಿರ ಮುಗಿದ 15 ದಿನಗಳೊಳಗಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಅಭಿವೃದ್ಧಿ ವಿಭಾಗದ **kprclibraries@gmail.com** ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು.
16. ಪಂಚತಂತ್ರ 2.0 ತಂತ್ರಾಂಶದಲ್ಲಿ ಇಂದೀಕರಿಸುವುದು.
17. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಬೇಸಿಗೆಯ ಶಿಬಿರ ಆಯೋಜನೆಯ ಕುರಿತಂತೆ ಉಸ್ತುವಾರಿ ಮಾಡುವುದು ಮತ್ತು ಅಗತ್ಯ ಸಹಕಾರ ನೀಡುವುದು.

18. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬೇಸಿಗೆಯ ಶಿಬಿರ ಆಯೋಜನೆಯ ಉಸ್ತುವಾರಿಗೆ ಹಾಗೂ ಸಹಕಾರ ನೀಡುವ ಕುರಿತಂತೆ ಅಗತ್ಯ ನಿರ್ದೇಶನ ನೀಡುವುದು.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು

**ಇವರಿಗೆ**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು (ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಯ ಅರಿವು ಕೇಂದ್ರದ ಮೇಲ್ವಿಚಾರಕರುಗಳಿಗೆ ಮತ್ತು ಗ್ರಾಮ ಪಂಚಾಯತಿ ಪುನರ್ವಸತಿ ಕಾರ್ಯಕರ್ತರಿಗೆ (ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮುಖಾಂತರ)

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಯವರಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಡಿಗಳ ಕಟ್ಟಡ , ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿಯವರಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು, ಇ-ಆಡಳಿತ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಅನಸಾರಾಗ್ರಾ& ಪಂ ರಾ ಸಂಸ್ಥೆ, ಮೈಸೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ಮಾಹಿತಿ ಕೇಂದ್ರ / ವೆಬ್ಸೈಟ್ ಕೇಂದ್ರ ಗ್ರಾಅಪ ಇಲಾಖೆ, ಬೆಂಗಳೂರು.
6. ಮಾಹಿತಿ ಕೇಂದ್ರ/ ವೆಬ್ಸೈಟ್ ಕೇಂದ್ರ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
7. ಕಛೇರಿ ಪ್ರತಿ

# ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರದ ಮಾರ್ಗಸೂಚಿ

**ಉದ್ದೇಶ ಮತ್ತು ಪ್ರಾಮುಖ್ಯತೆ**

ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಬೇಸಿಗೆ ರಜೆ ಸಮಯವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿ ಮಕ್ಕಳ ಬೌದ್ಧಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ವಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಮೂಲಕ 15 ದಿನಗಳ ಮಕ್ಕಳ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಈ ಮಕ್ಕಳ ಬೇಸಿಗೆ ಶಿಬಿರವನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಿವು ಕೇಂದ್ರದ ಗ್ರಂಥಾಲಯ ಮೇಲ್ವಿಚಾರಕರ ಸುಗಮಗಾರಿಕೆಯಲ್ಲಿ ಆಯಾ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದ ಶಾಲೆ/ಅರಿವು ಕೇಂದ್ರದಲ್ಲಿ ಹಮ್ಮಿಕೊಳ್ಳುವುದು.

15 ದಿನಗಳ ಬೇಸಿಗೆ ಶಿಬಿರದ ಮೂಲಕ ಮಕ್ಕಳಲ್ಲಿ ಓದುವ ಹವ್ಯಾಸ , ಅಂಕಿಸಂಖ್ಯೆ ಮತ್ತು ವಿಜ್ಞಾನ ವಿಷಯಗಳು, ನೈತಿಕತೆ ಮತ್ತು ನಾಯಕತ್ವ ವಿಷಯಗಳು ಮತ್ತು ಕಾರ್ಯಯೋಜನೆಗಳನ್ನು ರೂಪಿಸುವ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಚಟುವಟಿಕೆಗಳನ್ನು ಕೈಗೊಳ್ಳುವುದು. ಹೀಗೆ ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸುವುದು, ಗ್ರಾಮೀಣ ಬದುಕಿನ ದೈನಂದಿನ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಅರ್ಥಮಾಡಿಸುವುದು ಇತ್ಯಾದಿಗಳ ಜೊತೆಗೆ ಬೇಸಿಗೆಯ ರಜಾ ದಿನಗಳನ್ನು ಸಂತೋಷದಿಂದ ಮಕ್ಕಳು ಬಳಸಿಕೊಳ್ಳುವುದು.

## I. ಅನುಷ್ಠಾನ:

1. **ಶಿಬಿರದ ಅವಧಿ**: ಶಾಲೆಗಳಿಗೆ ಬೇಸಿಗೆ ರಜೆ ಪ್ರಾರಂಭವಾದಾಗಿನಿಂದ ಬೇಸಿಗೆ ರಜೆ ಅಂತ್ಯಗೊಳ್ಳುವವರೆಗೆ 15ದಿನಗಳ ಕಾಲ ಸ್ಥಳೀಯವಾಗಿ ಸೂಕ್ತವಾದ ದಿನಾಂಕಗಳಲ್ಲಿ - ಏಪ್ರಿಲ್2024 ರಿಂದ ಮೇ 2024 ರ ಮಾಹೆಯಲ್ಲಿ.(ಲೋಕಸಭೆಯ ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದಲ್ಲಿ ಚುನಾವಣೆ ನೀತಿ ಸಂಹಿತೆ ಮುಗಿದ ನಂತರ)
2. **ಶಿಬಿರದ ಸಮಯ**: ಬೆಳಿಗ್ಗೆ 10.00ರಿಂದ 01.30ಗಂಟೆಯವರೆಗೆ
3. **ಶಿಬಿರದಲ್ಲಿ ಭಾಗವಹಿಸುವ ಮಕ್ಕಳ ಸಂಖ್ಯೆ**: ಪ್ರತಿ ಶಿಬಿರದಲ್ಲಿ 40 ಮಕ್ಕಳು
4. **ಶಿಬಿರದಲ್ಲಿ ಭಾಗವಹಿಸುವ ಮಕ್ಕಳ ವಯಸ್ಸು**: 8 ರಿಂದ 13
5. **ಶಿಬಿರದ ಸ್ಥಳ** : ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದ ಸರ್ಕಾರಿ ಶಾಲೆ/ ಗ್ರಾಮ ಪಂಚಾಯಿತಿ ಅರಿವು ಕೇಂದ್ರ.

6. **ಪೂರ್ವ ಸಿದ್ಧತೆ**

- ಶಾಲೆಯ ಸಹಯೋಗದಲ್ಲಿ ಪೋಷಕರನ್ನು ಸಂಪರ್ಕಿಸಿ ಶಿಬಿರಕ್ಕೆ ಮಕ್ಕಳನ್ನು ಆಯ್ಕೆ ಮಾಡುವುದು ಮತ್ತು ಪೋಷಕರ ಒಪ್ಪಿಗೆ (ಪತ್ರದ ಮುಖೇನ) ಪಡೆಯುವುದು.
- ಶಿಬಿರಕ್ಕೆ 40 ಕ್ಕಿಂತ ಹೆಚ್ಚು ಮಕ್ಕಳು ನೋಂದಣಿಯಾದಲ್ಲಿ, ಆಯ್ಕೆಯನ್ನು ಲಾಟರಿ ಮೂಲಕ ಮಾಡುವುದು.
- ಶಿಬಿರ ನಡೆಯುವ ಸ್ಥಳದಲ್ಲಿ ಹೊಸದಾದ ಪ್ರಥಮ ಚಿಕಿತ್ಸಾ ಪೆಟ್ಟಿಗೆಯು ಕಡ್ಡಾಯವಾಗಿ ಇರುವಂತೆ ನೋಡಿಕೊಳ್ಳುವುದು.
- ಗ್ರಾಮ ಪಂಚಾಯತಿ ಅಧ್ಯಕ್ಷರು/ಸದಸ್ಯರು/ಸ್ವಸಹಾಯ ಸಂಘಗಳು/ಯುವಕ ಸಂಘಗಳು/ಮುಖಂಡರು ಮುಂತಾದವರನ್ನು ಸಂಪರ್ಕಿಸಿ ಸಹಕಾರವನ್ನು ಪಡೆಯುವುದು.
- ಮಗುವು ಪ್ರತಿ ದಿನ ಮನೆಯಿಂದ ಲಘು ಉಪಹಾರ ಮತ್ತು ನೀರನ್ನು ತರುವಂತೆ ಪೋಷಕರ ಗಮನಕ್ಕೆ ತರುವುದು.
- ಶಿಬಿರಕ್ಕೆ ಮಗುವನ್ನು ಕರೆತರುವುದು ಮತ್ತು ಕರೆದುಕೊಂಡು ಹೋಗುವುದು ಪೋಷಕರ ಜವಾಬ್ದಾರಿಯಾಗಿದೆ.

7. ಬೇಸಿಗೆ ಶಿಬಿರವನ್ನು ಗ್ರಾಮ ಪಂಚಾಯಿತಿ ನೇತೃತ್ವದಲ್ಲಿ ಅನುಷ್ಠಾನಗೊಳಿಸುವುದು. ಈ ಸಂಬಂಧ ಬೇಸಿಗೆ ಶಿಬಿರಕ್ಕೆ ಅಗತ್ಯವಿರುವ ಆಡಳಿತಾತ್ಮಕ ಸಹಕಾರವನ್ನು ಒದಗಿಸುವುದು. ಶಿಬಿರಕ್ಕೆ ಪೂರಕವಾಗಿ ಬೇಕಾಗಿರುವ ಅಗತ್ಯ ಸಾಮಗ್ರಿಗಳನ್ನು ಗ್ರಾಮ ಪಂಚಾಯಿತಿಯಿಂದ ಪೂರೈಸುವುದು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಲ್ಲಿ ಉಪಕರಣಗಳು ಲಭ್ಯವಿದ್ದಲ್ಲಿ ಮುಖ್ಯ ಶಿಕ್ಷಕರೊಂದಿಗೆ ಸಮನ್ವಯತೆ ಸಾಧಿಸಿ ಶಿಬಿರದ ಅವಧಿಯಲ್ಲಿ ಉಪಕರಣಗಳನ್ನು ಬಳಸಿಕೊಳ್ಳುವುದು.
8. ಗ್ರಾಮ ಪಂಚಾಯತಿ ಅರಿವು ಕೇಂದ್ರದ ಮೇಲ್ವಿಚಾರಕರು ಸದರಿ ಬೇಸಿಗೆ ಶಿಬಿರದ ಸುಗಮಗಾರರಾಗಿ ಕಾರ್ಯನಿರ್ವಹಿಸುವುದು.
9. ಶಿಬಿರದಲ್ಲಿ ವಿಜ್ಞಾನ ಮತ್ತು ಗಣಿತದ ಚಟುವಟಿಕೆಗಳನ್ನು ನಡೆಸಲು ಸ್ಥಳೀಯ ಶಾಲೆಯ ಶಿಕ್ಷಕರನ್ನು/ಸ್ವಯಂ ಪ್ರೇರಿತ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳುವುದು.
10. ಸ್ಥಳೀಯ ಕಲಾವಿದರನ್ನು ಗುರುತಿಸಿ ಅವರ ಮೂಲಕ ಮಕ್ಕಳಿಗೆ ಸ್ಥಳೀಯ ಕಲಾ ಪ್ರಕಾರಗಳನ್ನು ಪರಿಚಯ ಮಾಡಿಸುವುದು.
11. ಬೇಸಿಗೆ ಶಿಬಿರ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಮತ್ತು ಶುಚಿತ್ವ ಇರುವಂತೆ ನೋಡಿಕೊಳ್ಳುವುದು.

12. ಶಿಬಿರದ ಕೊನೆಯ ದಿನ ಮಕ್ಕಳೇ ಶಿಬಿರದ ಸಮಾರೋಪ ಸಮಾರಂಭವನ್ನು ಆಯೋಜಿಸುವಂತೆ ಮತ್ತು ನಿರ್ವಹಿಸುವಂತೆ ವ್ಯವಸ್ಥೆ ಮಾಡುವುದು. ಮಕ್ಕಳಿಂದಲೇ ಬರೆಯಲ್ಪಟ್ಟ ಆಹ್ವಾನ ಪತ್ರಿಕೆಗಳನ್ನು ಬಳಸುವುದು.ಸಮಾರಂಭಕ್ಕೆ ಬೇಕಾಗುವ ಪೂರಕ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿಯು ಒದಗಿಸುವುದು.

13. ಶಿಬಿರದಲ್ಲಿ ಮಕ್ಕಳ ಕಲಿತ ವಿಶೇಷ ಚಟುವಟಿಕೆಗಳನ್ನು ಮತ್ತು ಯೋಜನಾ ಕಾರ್ಯಗಳನ್ನು ಚುನಾಯಿತಿ ಪ್ರತಿನಿಧಿಗಳು, ಪೋಷಕರು, ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆಯ ಸದಸ್ಯರು, ಸಮುದಾಯ ಮುಖಂಡರ ಸಮ್ಮುಖದಲ್ಲಿ ಪ್ರಸ್ತುತ ಪಡಿಸುವಂತೆ ನೋಡಿಕೊಳ್ಳುವುದು.

14. ಅರಿವು ಕೇಂದ್ರದ ಮೇಲ್ವಿಚಾರಕರು ಶಿಬಿರದ ನಂತರ ಶಿಬಿರದ ಸಂಕ್ಷಿಪ್ತ ವರದಿಯನ್ನು ಚಟುವಟಿಕೆಯ ಸೂಕ್ತ ಛಾಯಾಚಿತ್ರಗಳೊಂದಿಗೆ ಸಿದ್ಧಪಡಿಸಿ ಶಿಬಿರ ಮುಗಿದ 15 ದಿನಗಳೊಳಗಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಅಭಿವೃದ್ಧಿ ವಿಭಾಗದ **kprclibraries@gmail.com ಇಮೇಲ್** ವಿಳಾಸಕ್ಕೆ ಕಳುಹಿಸುವುದು.

15. ಪಂಚತಂತ್ರ 2.0 ತಂತ್ರಾಂಶದಲ್ಲಿ ಇಂದೀಕರಿಸುವುದು.

## II. ಶಿಬಿರದ ಬಗ್ಗೆ ಪೋಷಕರಿಗೆ ಈ ಕೆಳಗಿನಂತೆ ಮಾಹಿತಿ ಒದಗಿಸುವುದು ಅತ್ಯಗತ್ಯ

- ಶಿಬಿರ ನಡೆಯುವ ಸ್ಥಳ
- ಶಿಬಿರ ನಡೆಯುವ ಕಾಲಾವಧಿ
- ಶಿಬಿರದ ಉಪಯೋಗ / ಚಟುವಟಿಕೆಗಳು
- ಪೋಷಕರ ಒಪ್ಪಿಗೆ ಪತ್ರ
- ಶಿಬಿರದ ಅವಧಿಯಲ್ಲಿ ಲಘು ಉಪಹಾರ ಮತ್ತು ಕುಡಿಯುವ ನೀರು ಮಕ್ಕಳೊಂದಿಗೆ ಕಳುಹಿಸಿಕೊಡುವುದು.
- ಮಕ್ಕಳನ್ನು ಶಿಬಿರಕ್ಕೆ ಕರೆತರುವುದು ಮತ್ತು ಕರೆದೊಯ್ಯುವುದು

## III. ಸುಗಮಗಾರರು ಗಮನಿಸಬೇಕಾದ ಅಂಶಗಳು

1. ಮಕ್ಕಳನ್ನು ಅವರ ಹೆಸರಿನಿಂದಲೇ ಕರೆಯುವುದು
2. ಶಿಬಿರಕ್ಕೆ ಬರುವ ಮಕ್ಕಳಿಗೆ ಸಮಯ ನಿರ್ವಹಣೆ , ಶುಚಿತ್ವ ಮತ್ತು ಚಟುವಟಿಕೆಗಳಿಗೆ ಪೂರಕವಾಗಿ ಉಡುಪುಗಳನ್ನು ಧರಿಸುವಂತೆ ಮುಂಚಿತವಾಗಿಯೇ ತಿಳಿಸುವುದು.
3. ಎಲ್ಲರನ್ನೂ ಸಮಾನವಾಗಿ ಮತ್ತು ಗೌರವದಿಂದ ಕಾಣುವುದು
4. ಮಕ್ಕಳ ಉತ್ತಮ ಗುಣಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು
5. ಮಕ್ಕಳನ್ನು ಜಾಗರೂಕತೆಯಿಂದ ನೋಡಿಕೊಳ್ಳುವುದು.
6. ಮಕ್ಕಳಿಗೆ ಒತ್ತಾಯದಿಂದ ಯಾವುದೇ ಚಟುವಟಿಕೆಯನ್ನು ಮಾಡಿಸಕೂಡದು.
7. ಪ್ರತಿ ದಿನದ ಮುಕ್ತಾಯ
    - ಕಲಿತ ವಿಷಯಗಳ ಅವಲೋಕನ
    - ಚಟುವಟಿಕೆಗಳ ಪುನರ್ ಮನನ
    - ಅರ್ಥವಾಗದ್ದನ್ನು ಸುಗಮಕಾರರಿಂದ ಪುನಃ ಕೇಳಿ ತಿಳಿಯಲು ಅವಕಾಶ

- ➢ ಪ್ರಶ್ನೋತ್ತರ ( ಮಕ್ಕಳಿಂದ ಪ್ರಶ್ನೆಗಳು ಸುಗಮಕಾರರಿಂದ ಉತ್ತರ)
- ➢ ಪ್ರತಿ ದಿನ ಶಿಬಿರದ ಬಗ್ಗೆ ಹಿಮ್ಮಾಹಿತಿಯನ್ನು ಪಡೆಯುವುದು.

8. ಶಿಬಿರದ ಅವಧಿ ಮುಗಿದ ನಂತರ ಅರಿವು ಕೇಂದ್ರದ ಮೇಲ್ವಿಚಾರಕರು ಮತ್ತು ಸ್ವಯಂ ಸೇವಕರು, ಮುಂದಿನ ದಿನದ ಚಟುವಟಿಕೆಗಳಿಗೆ ಅಗತ್ಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು.
9. ಶಿಬಿರವು ಆರಂಭವಾಗುವ ಮುನ್ನಾ ದಿನ, ಶಿಬಿರವನ್ನು ಆಯೋಜಿಸುವ ಸ್ಥಳದಲ್ಲಿ ಮಕ್ಕಳನ್ನು ಮತ್ತು ಸಮುದಾಯವನ್ನು ಆಕರ್ಷಿಸುವಂತೆ ಬ್ಯಾನರ್, ಬಂಟಿಂಗ್ಸ್, ಮಾದರಿಗಳ ಜೋಡಣೆ, ಕಲಿಕಾ ಚಪ್ಪರಗಳಿಂದ ಸಿಂಗರಿಸುವುದು.

## IV. ಸುಗಮಗಾರರು ಅನುಸರಿಸಬೇಕಾದ ಮುಂಜಾಗ್ರತ ಕ್ರಮಗಳು

1. ಅರಿವು ಕೇಂದ್ರದಲ್ಲಿ ಶಿಬಿರವನ್ನು ಆಯೋಜಿಸಿದರೆ ಬುಕ್ ರ್‍ಯಾಕ್ ಸುಸ್ಥಿತಿಯಲ್ಲಿ ಇರುವಂತೆ ಜಾಗ್ರತೆ ವಹಿಸುವುದು.
2. ಅರಿವು ಕೇಂದ್ರ/ಶಾಲೆಯ ಕಿಟಕಿ-ಬಾಗಿಲು ತೆರೆದಿರುವಂತೆ ನೋಡಿಕೊಳ್ಳುವುದು
3. ಮಕ್ಕಳು ಅರಿವು ಕೇಂದ್ರ/ಶಾಲೆಯ ಹೊರಭಾಗದ ಪೊದೆ-ಸಂದುಗೊಂದಿಗಳಲ್ಲಿ ಓಡಾಡದಂತೆ ತಿಳಿ ಹೇಳುವುದು / ಗಮನಹರಿಸುವುದು.
4. ಪ್ರತಿದಿನ ಹಾಜರಾತಿ ತೆಗೆದುಕೊಳ್ಳುವುದು
5. ಶಿಬಿರದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು
6. ಅನಾರೋಗ್ಯ ಪೀಡಿತ ಮಕ್ಕಳನ್ನು ತಕ್ಷಣ ಮನೆಗೆ ವಾಪಸ್ ತಲುಪಿಸುವ ವ್ಯವಸ್ಥೆ (ಪೋಷಕರಿಗೆ ಫೋನ್ ಮಾಡಿ ತಿಳಿಸುವುದು) ಮಾಡುವುದು.
7. ಪುಸ್ತಕಗಳು ಮಕ್ಕಳ ಕೈಗೆಟಕುವಂತೆ ನೋಡಿಕೊಳ್ಳುವುದು ಹಾಗೂ ಮಕ್ಕಳು ರ್‍ಯಾಕ್ ಮೇಲೆ ಹತ್ತದಂತೆ ಜಾಗ್ರತೆ ವಹಿಸುವುದು.
8. ಬೆಂಕಿ ಪೊಟ್ಟಣ, ಮೇಣದ ಬತ್ತಿ, ಕತ್ತರಿ, ಮೊಳೆ, ಸೂಜಿ, ಕಟರ್, ಬ್ಲೇಡ್ ಇತ್ಯಾದಿ ಅಪಾಯಕಾರಿ ವಸ್ತುಗಳು ಮಕ್ಕಳು ಎಚ್ಚರಿಕೆಯಿಂದ ಬಳಸುವಂತೆ ಸುಗಮಗಾರರು ಜಾಗ್ರತೆ ವಹಿಸುವುದು.
9. ಕ್ಷೇತ್ರಭೇಟಿ ಸಂದರ್ಭದಲ್ಲಿ ಸುಗಮಗಾರರು ಮಕ್ಕಳ ಸುರಕ್ಷತೆಯ ಬಗ್ಗೆ ಗಮನಹರಿಸುವುದು.
10. ಪೋಷಕರೊಂದಿಗೆ ನಗುಮುಖದಿಂದ / ಸಮಾಧಾನದಿಂದ ವರ್ತಿಸುವುದು.
11. ಶಿಬಿರಕ್ಕೆ ಆಗಮನಿಸುವ ಮಕ್ಕಳ ನೋಂದಣಿ ನಮೂನೆಯಲ್ಲಿ ಮಗುವಿನ ಪ್ರಾಥಮಿಕ ಮಾಹಿತಿಯನ್ನು ಪಡೆಯುವುದು. (ಅನುಬಂಧ-1)
12. ಶಿಬಿರಕ್ಕೆ ಮಕ್ಕಳ ಆಗಮನ ಮತ್ತು ನಿರ್ಗಮನದ ವಹಿಯಲ್ಲಿ ಮಗುವಿನ ಹೆಸರು, ಶಿಬಿರಕ್ಕೆ ಬಂದ ಸಮಯ, ಹೊರಹೋಗುವ ಸಮಯ, ಸಹಿ ಪಡೆಯುವುದು ಕಡ್ಡಾಯ
13. ಪ್ರತಿ ದಿನದ ಶಿಬಿರದಲ್ಲಿ ನಡೆಯುವ ವಿದ್ಯಾಮಾನಗಳ ಬಗ್ಗೆ ಆಯಾ ದಿನವೇ ವರದಿ ಬರೆದಿಡುವುದು.
14. ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಭಾಗವಿಸುವಿಕೆಯ ಪ್ರಮಾಣ ಪತ್ರವನ್ನು ಮತ್ತು ಸುಗಮಗಾರರಿಗೆ ಪ್ರಶಂಸಾಪತ್ರವನ್ನು ನೀಡುವುದು. (ಅನುಬಂಧ-2)

## ಅನುಬಂಧ -1

**ನೋಂದಣಿ ನಮೂನೆ**

| | | |
|---|---|---|
| 1 | ಮಗುವಿನ ಹೆಸರು | |
| 2 | ಲಿಂಗ | |
| 3 | ವಯಸ್ಸು | |
| 4 | ಶಾಲೆಯ ಹೆಸರು | |
| 5 | ತರಗತಿ | |
| 6 | ಪೋಷಕರ ಹೆಸರು | |
| 7 | ವಿಳಾಸ | |
| 8 | ದೂರವಾಣಿ ಸಂಖ್ಯೆ | |

ದಿನಾಂಕ ---------- ರಿಂದ ಗ್ರಾಮ ಪಂಚಾಯಿತಿ ಅರಿವು ಕೇಂದ್ರ/ಶಾಲೆಯಲ್ಲಿ ಆಯೋಜನೆಗೊಳ್ಳುತ್ತಿರುವ "ಗ್ರಾಮೀಣ ಬೇಸಿಗೆ ಶಿಬಿರ"ದಲ್ಲಿ ನನ್ನ ಮಗ/ಮಗಳು 15 ದಿನಗಳು ಭಾಗವಹಿಸಲು ನಾನು ಸಮ್ಮತಿಸಿರುತ್ತೇನೆ.

ಸ್ಥಳ:

ದಿನಾಂಕ: ಪೋಷಕರ ಸಹಿ

**ಅನುಬಂಧ -2**

**ಮಾದರಿ ಪ್ರಮಾಣಪತ್ರ**

# ---------- ಗ್ರಾಮ ಪಂಚಾಯಿತಿ ಕಾರ್ಯಾಲಯ

**-------- ತಾಲ್ಲೂಕು, -------- ಜಿಲ್ಲೆ**

# ಗ್ರಾಮೀಣ ಬೇಸಿಗೆ ಶಿಬಿರ

## ಭಾಗವಹಿಸುವಿಕೆ ಪ್ರಮಾಣ ಪತ್ರ

ಕು. ____ ಬಿನ್___________ರವರು___ ಗ್ರಾಮದ ನಿವಾಸಿಯಾಗಿದ್ದು, ---------- ಗ್ರಾಮ ಪಂಚಾಯಿತಿಯಿಂದ ದಿನಾಂಕ -------- ರಿಂದ ------- ರವರೆಗೆ ಆಯೋಜಿಸಿದ ಗ್ರಾಮೀಣ ಬೇಸಿಗೆ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ ಎಂದು ಪ್ರಮಾಣೀಕರಿಸಿದೆ.

**ಸಹಿ** **ಸಹಿ**

**ಪಂಚಾಯಿತಿ ಅಭಿವೃದ್ಧಿ ಅಧಿಕಾರಿ**
**----------ಗ್ರಾಮ ಪಂಚಾಯಿತಿ**

**ಅಧ್ಯಕ್ಷರು**
**----------ಗ್ರಾಮ ಪಂಚಾಯಿತಿ**

**ಅನುಬಂಧ-3**

**ಮಾದರಿ ಪ್ರಶಂಸಾ ಪತ್ರ**

# --------- ಗ್ರಾಮ ಪಂಚಾಯಿತಿ ಕಾರ್ಯಾಲಯ

## -------- ತಾಲ್ಲೂಕು, --------- ಜಿಲ್ಲೆ

# ಗ್ರಾಮೀಣ ಬೇಸಿಗೆ ಶಿಬಿರ

## ಪ್ರಶಂಸಾ ಪತ್ರ

ಕು/ಶ್ರೀ/ಶ್ರೀಮತಿ/. _______ರವರು, __________ ಗ್ರಾಮದ ನಿವಾಸಿಯಾಗಿದ್ದು, ---------- ಗ್ರಾಮ ಪಂಚಾಯಿತಿಯಿಂದ ದಿನಾಂಕ --------ರಿಂದ ---------ರವರೆಗೆ ಆಯೋಜಿಸಿದ ಗ್ರಾಮೀಣ ಬೇಸಿಗೆ ಶಿಬಿರದಲ್ಲಿ ಸುಗಮಗಾರರಾಗಿ ಸಕ್ರಿಯವಾಗಿ ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿರುತ್ತಾರೆ. ಇವರ ಈ ಸೇವೆಯನ್ನು ಶ್ಲಾಘಿಸಿ ಪ್ರಶಂಸಾಪತ್ರವನ್ನು ನೀಡಿದೆ.

| ಸಹಿ | ಸಹಿ | ಸಹಿ |
|---|---|---|
| **ಪಂಚಾಯಿತಿ ಅಭಿವೃದ್ಧಿ ಅಧಿಕಾರಿ<br>----------ಗ್ರಾಮ ಪಂಚಾಯಿತಿ** | **ಅಧ್ಯಕ್ಷರು<br>----------ಗ್ರಾಮ ಪಂಚಾಯಿತಿ** | **ಕಾರ್ಯನಿರ್ವಾಹಕ ಅಧಿಕಾರಿಗಳು<br>--------ತಾಲ್ಲೂಕು ಪಂಚಾಯಿತಿ** |